# ಅಂಗೈಯಷ್ಟು ಜಾಗ ಅರಮನೆಯಷ್ಟು ಬೀಜ

**ಪುಟ್ಟ ಜಾಗದಲ್ಲಿ 650ಕ್ಕೂ ಹೆಚ್ಚು ಭತ್ತದ ತಳಿಗಳನ್ನು ಸಂಗ್ರಹಿಸಿರುವ ಸತ್ಯನಾರಾಯಣ ಅವರು ಎಲ್ಲ ತಳಿಗಳ ಕಥೆಯನ್ನೂ ಹೇಳಬಲ್ಲರು.**

■ ಕೋಡಿಬೆಟ್ಟು ರಾಜಲಕ್ಷ್ಮಿ



ಬಿತ್ತನೆ ಮಾಡಿದ ಪುಟ್ಟ ಜಾಗ



ಹತ್ತಡಿ ಉದ್ದ ಅಗಲವೂ ಇಲ್ಲದ ಪುಟ್ಟ ಕೊಠಡಿಯಲ್ಲಿ ಭತ್ತದ ತೆನೆಗಳ ಕಟ್ಟು. ಪುಟ್ಟ ಜಾಗದಲ್ಲಿ 650ಕ್ಕೂ ಹೆಚ್ಚು ನಮೂನೆಯ ಭತ್ತದ ತಳಿಗಳು! ಅವುಗಳನ್ನೆಲ್ಲ ದೇಶದ ವಿವಿಧೆಡೆಗಳಿಂದ ಮುತುವರ್ಜಿ ವಹಿಸಿ ಸಂಗ್ರಹಿಸಿರುವ ಸತ್ಯನಾರಾಯಣ ಬೆಳೇರಿ ಅವರಿಗೆ ಕಳೆದ ವರ್ಷ ಪದ್ಮಶ್ರೀ ಪ್ರಶಸ್ತಿಯ ಗೌರವ. ಆಗಲೇ ಗೊತ್ತಾಗಿದ್ದು, ಇಷ್ಟೊಂದು ಸರಳವಾಗಿರುವ ಸತ್ಯನಾರಾಯಣ ಅವರದು ಸಂತರಂತಹ ಬದುಕು ಎಂಬುದು.

ಕಾಸರಗೋಡಿನ ಬೆಳ್ಳೂರು ಗ್ರಾಮಪಂಚಾಯಿತಿ ವ್ಯಾಪ್ತಿಯ ಬೆಳೇರಿ ಎಂಬಲ್ಲಿ ಪುಟ್ಟದೊಂದು ಜಗಲಿ ಮನೆಯಲ್ಲಿ ಸತ್ಯನಾರಾಯಣ ವಾಸವಾಗಿದ್ದಾರೆ. ಭತ್ತದ ತಳಿಗಳನ್ನು ಸಂಗ್ರಹಿಸುವುದು ಅವರ ಹವ್ಯಾಸ. ನಿರಂತರ ಶ್ರಮದ ಫಲವಾಗಿ ಅವರ ಸಂಗ್ರಹದಲ್ಲಿರುವ ಅಮೂಲ್ಯ ತಳಿಗಳನ್ನು ಓರಣವಾಗಿ ಜೋಡಿಸಲು, ಪ್ರತಿ ವರ್ಷವೂ ಬಿತ್ತನೆ ಮಾಡಿ ಆ ಬೀಜಗಳನ್ನು ಜೀವಂತವಾಗಿ ಕಾಪಿಟ್ಟುಕೊಳ್ಳಲು ಒಂದು ಉತ್ತಮ ವ್ಯವಸ್ಥೆಯ ಅಗತ್ಯವಿದೆ ಎಂದು ನೋಡುಗರಿಗೆ ಸಹಜವಾಗಿಯೇ ಅನಿಸುತ್ತದೆ.

ಪುಟ್ಟ ಕೊಠಡಿಯಲ್ಲಿ ಅವರು ಸಾಲಾಗಿ ಜೋಡಿಸಿದ ಭತ್ತದ ತೆನೆಯ ಕಟ್ಟುಗಳಲ್ಲಿ ಕೆಲವು ಕಟ್ಟುಗಳಿಗೆ ಚೀಟಿ ಹಚ್ಚಿ ಹೆಸರುಗಳನ್ನು ಬರೆದಿದ್ದಾರೆ. ಮತ್ತೆ ಕೆಲವು ಗೊಂಚಲನ್ನು ನೋಡುತ್ತಲೇ ಅವುಗಳನ್ನು ಗುರುತಿಸಿ ವೈಶಿಷ್ಟ್ಯವನ್ನು ಹೇಳುತ್ತಾರೆ. ಅಲ್ಲಿರುವ 650 ತಳಿಗಳ ಹಿಂದೆ 650ಕ್ಕೂ ಹೆಚ್ಚು ಕಥೆಗಳು ಅಡಕವಾಗಿವೆ.

ಈ ಪುಟ್ಟ ಕೋಣೆ ಅನ್ನದಾತನ ಕಥಾಸರಿತ್ಸಾಗರದಂತೆ ಭಾಸವಾಗುತ್ತದೆ. ‘ಇದು ನೋಡಿ, ಕಪ್ಪುಕಗ್ಗ ಭತ್ತ. ಉಪ್ಪುನೀರಿನಲ್ಲಿಯೂ ಈ ಬೆಳೆಯನ್ನು ಬೆಳೆಯಬಹುದು. ಅಂಬೆಮೊಹರಿ ತೆನೆಯು ಚಿನ್ನದ ಕುಸುರಿ ಮಾಡಿದ ಸರದಂತೆ ಸುಂದರವಾಗಿದೆ. ಬಾಣಂತಿಯರು ಈ ಅಕ್ಕಿಯಿಂದ ಮಾಡಿದ ಅನ್ನ ಸೇವಿಸಿದರೆ, ಕಬ್ಬಿಣಾಂಶ ಇರುವ ಈ ಅನ್ನ ಎದೆಹಾಲು ಉತ್ಪತ್ತಿಗೆ ಸಹಾಯಕ. ಮಧುಸಾಲೆ ಅಕ್ಕಿಯಲ್ಲಿ ಸಕ್ಕರೆಯ ಅಂಶ ಬಹಳ ಕಮ್ಮಿ. ಮಧುಮೇಹ ಇರುವವರಿಗೆ ಅನ್ನ ಸೇವಿಸಲೇಬೇಕು ಎಂದಿದ್ದರೆ ಈ ಅಕ್ಕಿಯನ್ನು ಬೆಳೆದು ಉಣ್ಣಬೇಕು. ಕಯಮೆ ಎಂಬ ಭತ್ತದ ತಳಿಯಲ್ಲಿ ಇನ್ನೂ ಅನೇಕ ಉಪವರ್ಗಗಳಿವೆ. ಅವೆಲ್ಲವೂ ಅಕ್ಕಿ ಹಳೆಯದಾದಷ್ಟು ರುಚಿ ಹೆಚ್ಚುವ ಗುಣ ಹೊಂದಿವೆ.’ ಸತ್ಯನಾರಾಯಣ ಅವರು ಎಲ್ಲ ತೆನೆಗಳ ಕಥೆಗಳನ್ನೂ ಹೇಳಬಲ್ಲರು. ಈ ತಳಿಗಳ ಊರು ಯಾವುದು, ಮಹತ್ವವೇನು ಎಂಬ ಕಥೆಗಳದ್ದು ಬೇರೆಯದ್ದೇ ಲೋಕ.

> **ಪದ್ಮಶ್ರೀ ಪುರಸ್ಕೃತ ಸತ್ಯನಾರಾಯಣ ಬೆಳೇರಿ ಅವರ ಭತ್ತದ ಬೀಜ ಸಂಗ್ರಹಕ್ಕೆ ಸೌಕರ್ಯದ ಕೊರತೆ**

ಭತ್ತದ ಬೀಜ ಸಂಗ್ರಹಿಸುವುದು ನಿರಂತರ ಕಾಯಕ. ‘ಅತಿಕಾಯ’ ಎಂಬ ಭತ್ತದ ಬೀಜ ಒಂದು ಮುಷ್ಟಿ ದೊರೆಯಿತು ಎಂದಿಟ್ಟುಕೊಳ್ಳಿ. ಅದು ಬೆಳೆಯುವ ಕಾಲಮಾನ ಅರಿತುಕೊಂಡು, ಬಿತ್ತನೆ ಮಾಡಬೇಕು. ನಂತರ ಆ ಭತ್ತವನ್ನು ಎತ್ತಿಟ್ಟುಕೊಳ್ಳಬೇಕು. ಈ ಪ್ರಕ್ರಿಯೆಯನ್ನು ಪ್ರತೀವರ್ಷ ಮಾಡಿದರೆ ಮಾತ್ರ ಸಂಗ್ರಹಿಸಿದ ಬೀಜ ಉಳಿಯಬಲ್ಲದು. ಹಾಗಿದ್ದರೆ 650 ಬೀಜಗಳನ್ನು ಕಾಪಾಡಿಕೊಳ್ಳುವುದು ಹೇಗೆ ಎಂದು ಪ್ರಶ್ನಿಸಿದರೆ, ಸತ್ಯನಾರಾಯಣ ಅವರು ನೋಟ್‌ಬುಕ್ ಒಂದನ್ನು ತೋರಿಸುತ್ತಾರೆ. ಮೂರ್ನಾಲ್ಕು ಅಡಿ ಅಗಲದ ಜಾಗದಲ್ಲಿ ಒಂದೊಂದೇ ಮುಷ್ಟಿಯಷ್ಟು ಭತ್ತ ಬಿತ್ತನೆ ಮಾಡಿ ಅದರ ಸಂಖ್ಯೆ ಮತ್ತು ಮಾಹಿತಿಯನ್ನು ನೋಟ್‌ಬುಕ್‌ನಲ್ಲಿ ಬರೆದಿಡುತ್ತಾರೆ. ಪ್ರತೀ ಬಿತ್ತನೆ ಮತ್ತು ಬೆಳವಣಿಗೆಯ ಅವಧಿಯನ್ನು ಗಮನವಿಟ್ಟು ನೋಡಿಕೊಳ್ಳಬೇಕು ಎನ್ನುವ ಸತ್ಯನಾರಾಯಣ ಅವರಿಗೆ ಇದೊಂದೇ ಹವ್ಯಾಸ ಇರುವುದಲ್ಲ. ಜೇನು ಸಾಕಾಣಿಕೆ ಮಾಡುವುದು, ಮನೆಬಳಕೆಗಾಗಿ ಅಗತ್ಯವಿರುವ ಹಣ್ಣಿನ ಗಿಡಗಳ ಕಸಿ ಕಟ್ಟುವುದು, ಅಪರೂಪದ ಬಾಳೆತಳಿಗಳ ಸಂಗ್ರಹ, ವಿವಿಧ ರೀತಿಯ ಕಾಳುಮೆಣಸಿನ ಗಿಡಗಳ ಸಂಗ್ರಹ... ಹೀಗೆ ತಮ್ಮ ಮನೆಯ ಸುತ್ತಮುತ್ತಲಿನ ಜಾಗದಲ್ಲಿಯೇ ಎಲ್ಲ ಸಾಹಸವನ್ನೂ ಅವರು ಮಾಡುತ್ತಿದ್ದಾರೆ.

‘ಈ ಅಪೂರ್ವ ಭತ್ತದ ಸಂಗ್ರಹ ಕಾಪಿಡಲು ಸರ್ಕಾರದ ನೆರವು ದೊರೆಯಬೇಕು ನಿಮಗೆ...’ ಎಂದು ಹಿತೈಷಿಗಳು ಸಲಹೆ ಮಾಡಿದರೆ, ಸತ್ಯನಾರಾಯಣ ನೇರ ಮಾತುಗಳಲ್ಲಿ ಹೇಳುವುದು ಹೀಗೆ: ‘ಸುಮಾರು 15 ವರ್ಷಗಳ ಹಿಂದೆ ಕೃಷಿ ತಪಸ್ವಿ ಚೇರ್ಕಾಡಿ ರಾಮಚಂದ್ರ ರಾಯರು ಕೊಟ್ಟ ಒಂದು ಮುಷ್ಟಿ ರಾಜಕಯಮೆ ಭತ್ತದೊಂದಿಗೆ ಈ ಸಂಗ್ರಹ ಹವ್ಯಾಸ ಆರಂಭವಾಯಿತು. ರೇಡಿಯೊದಲ್ಲಿ ಬರುವ ಕೃಷಿರಂಗ ಕಾರ್ಯಕ್ರಮವೇ ನನ್ನ ವಿಶ್ವವಿದ್ಯಾಲಯ. ವಿವಿಧ ಕೃಷಿ ವಿಶ್ವವಿದ್ಯಾಲಯಗಳು, ತಜ್ಞರು, ಕೃಷಿಕರು ನನ್ನ ಹವ್ಯಾಸಕ್ಕೆ ನೆರವಾಗಿದ್ದಾರೆ. ಈ ಕೆಲಸ ಖುಷಿಕೊಡುತ್ತಿದೆ. ಇದಕ್ಕಾಗಿ, ನನಗೆ ಅಂಥಾ ಸೌಕರ್ಯ ಬೇಕು ಎಂದು ಯಾರನ್ನೂ ದುಂಬಾಲು ಬೀಳುವುದು ಸರಿಯಲ್ಲ’.

ಸತ್ಯನಾರಾಯಣ ಅವರ ನಿಸ್ವಾರ್ಥದ ಮಾತುಗಳೇನೇ ಇರಲಿ, ಭತ್ತದ ತಳಿಗಳ ಈ ಮಹಾನ್ ಕಣಜವನ್ನು ಕಾಪಾಡಿಕೊಳ್ಳಬೇಕಾದುದು ನಮ್ಮೆಲ್ಲರ ಅಗತ್ಯ. ■